## 2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.1642/2011
ಸಿಡಬ್ಲ್ಯೂ.7 ಪಿಡಬ್ಲ್ಯೂ.6

ಸಾಕ್ಷಿಯ ಹೆಸರು - ಡಾಃ ಪ್ರೇಮಾ ಮೆನಸಿ

ವಯಸ್ಸು - 69 ವರ್ಷ

ಉದ್ಯೋಗ - ನಿವೃತ ವೈದ್ಯಾಧಿಕಾರಿ

ವಾಸ - ಬೆಳಗಾವಿ

ದಿನಾಂಕಃ 9-2-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

ನಾನು ಜನರಲ್ ಆಸ್ಪತ್ರೆ ಗೋಕಾಕನಲ್ಲಿ ಅರವಳಿಕೆ ತಜ್ಞ ಆಗಿ 1992 ರಿಂದ 2013 ರ ವರೆಗೆ ಕಾರ್ಯ ನಿರ್ವಹಿಸಿದ್ದೇನೆ.

ದಿಃ 15-9-2011 ರಂದು ರಾತ್ರಿ 11-15 ಗಂಟೆಗೆ ಅರ್ಜುನ ಅಲ್ಲಪ್ಪ ಬಂಡಿ ಎನ್ನುವರು ಚಾಸಾ-1 ರವರ ಮೇಲೆ ಹಲ್ಲೆ ಆಗಿರುತ್ತದೆ ಎಂದು ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಸದರಿಯವರನ್ನು ಪರೀಕ್ಷಿಸಲಾಗಿ ಕೆಳಕಂಡ ಗಾಯಗಳು ಕಂಡುಬಂದವು.

1) ಹಣೆಯ ಬಲಭಾಗದಲ್ಲಿ ಬಾವು 3x2 ಸೆ.ಮೀ

2) ಬಲ ಮುಂಗೈದ ಮೇಲಗಡೆ ಬಹಳಷ್ಟು ತೆರಚಿದ ಗಾಯಗಳಾಗಿದ್ದು ಅವು 5 ಸೆ.ಮೀ ಅಗಲ ಮುಂಗೈಯ ಸುತ್ತ ಆಗಿದ್ದವು.

3) ಎಡಮುಂಗೈನ ಮೇಲೆ ಬಹಳಷ್ಟು ತೆರಚಿದ ಗಾಯಗಳಾಗಿದ್ದು ಅದರ ಗಾತ್ರ 4x3 ಸೆ.ಮೀ

4)ಹೊಟ್ಟೆ ಭಾಗದಲ್ಲಿ ಮುಟ್ಟಿದರೆ ನೋವು ಕಾಣಿಸುತ್ತಿತ್ತು.

ಅವಳನ್ನು ಅದೇ ದಿನ ಒಳರೋಗಿಯಾಗಿ ದಾಖಲಿಸಿಕೊಂಡು ದಿಃ18-9-2011 ರಂದು ಬಿಡುಗಡೆ ಮಾಡಿರುತ್ತೆನೆ.

ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದವು ಅವುಗಳು ಬಿರುಸಾದ ಮತ್ತು ಮೊಂಡಾದ ವಸ್ತುಗಳು ತಾಗಿದಾಗ ಆಗುವಂತಹ ಗಾಯಗಳಾಗಿರುತ್ತವೆ. ನಾನು ತಪಾಸನೆ ಮಾಡಿದಾಗ ಅವು 6 ಗಂಟೆಒಳಗಿನ ಗಾಯಗಳಾಗಿರುತ್ತವೆ. ಈ ವಿಷಯವಾಗಿ ನಾನು ಗಾಯದಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಗಾಯದ ಪ್ರಮಾಣ ಪತ್ರವನ್ನು ನಿ.ಪಿ.4 ಎಂದು ಗುರುತಿಸಲಾಯಿತು., ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಅಂತಾ ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ಸಾಮಾನ್ಯವಾಗಿ ಹಳ್ಳಿಗಳಲ್ಲಿ ಹೊಲದಲ್ಲಿ ಕೆಲಸ ಮಾಡುವಾಗ ಬಿರುಸಾದ ವಸ್ತುಗಳ ಮೇಲೆ ಬಿದ್ದಾಗ ಮೇಲೆ ಹೇಳಿದ ಗಾಯಗಳು ಆಗಬಹುದು ಎಂದರೆ ವಿರಳವಾಗಿ ಆಗಬಹುದು. ಸಾಕ್ಷಿ ಮುಂದುವರೆದು ಚಾಸಾ-1 ರವರ ಮುಂಗೈಗೆ ಆದ ಗಾಯಗಳನ್ನು ನೋಡಿದರೆ ಬಳೆಗಳು ಒಡೆದು ಸುತ್ತಲೂ ಗಾಯಗಳು

ಆಗಿರಬಹುದು ಎಂದು ನುಡಿಯುತ್ತಾರೆ. ಈ ರೀತಿ ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ನಾನು ಬಳಗಳಿಂದ ಆದ ಗಾಯಗಳು ಅಂತಾ ನಮೂದು ಮಾಡಿಲ್ಲ ಎಂದರೆ ಸರಿ. ಚಾಸಾ-1 ರವರಿಗೆ ನೀಡಿದ ಚಿಕಿತ್ಸೆಗಳ ವಿವರವನ್ನು ನಿಪಿ-4 ರಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಯಾವುದೇ ಚಿಕಿತ್ಸೆ ಕೊಡದೇ ಇದ್ದರಿಂದ ಈ ರೀತಿ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಬಳೆ ಹೊಡೆದರೆ ಅದು ಚೂಪಾದ ಅಂಚು ಆಗುತ್ತದೆ ಎಂದರೆ ಸಾಕ್ಷಿಯು ಅದು ಬಿರುಸಾದ ವಸ್ತು ಇರುತ್ತದೆ , ಕೆಲವೊಂದು ಬಾರಿ ಅದು ಚೂಪಾಗಿ ಇರದೇ ಇರಬಹುದು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಬಳೆಯ ಅಗಲ 1 ಸೆ.ಮೀ ಕ್ಕಿಂತ ಕಡಿಮೆ ಇರುತ್ತದೆ ಅಂದರೆ ಸರಿಯಲ್ಲ. ಅದು ಬಳೆಯ ಮೇಲೆ ಅವಲಂಬಿತವಾಗಿರುತ್ತದೆ. ಗಾಜಿನ ಬಳೆಗಳು ಮಾತ್ರ ಒಡೆಯುತ್ತವೆ ಎಂದರೆ ಸರಿ. ಗಾಜಿನ ಬಳೆಗಳು ಒಡೆದರೆ ಅದು ಶರೀರಕ್ಕೆ ಚುಚ್ಚಿ ಗಾಯಗಳು ಆಗಬಹುದು ಎಂದರೆ ಸರಿ. ನಾನು ಪರೀಕ್ಷೆ ಮಾಡುವಾಗ ರಕ್ತಸ್ರಾವ ಆಗುತ್ತಿರಲಿಲ್ಲ. ಸಾಕ್ಷಿ ಮುಂದುವರೆದು ಅವು ಸುಮಾರು 6 ಗಂಟೆ ಆಗಿದ್ದರಿಂದ ರಕ್ತ ಹೆಪ್ಪುಗಟ್ಟಿರುತ್ತದೆ. ಸಾಮಾನ್ಯವಾಗಿ ತೆರಚಿದ ಗಾಯ 06 ಗಂಟೆ ನಂತರ ಬಣ್ಣ ಬದಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಂತರ ನಿಧಾನವಾಗಿ ಬದಲಾಗುತ್ತದೆ.

ಚಾಸಾ-1 ರವರ ಹೊಟ್ಟೆಯ ಸ್ಕ್ಯಾನ್ ಮತ್ತು ಎಕ್ಸರೇ ಮಾಡಿರುವುದಿಲ್ಲ. ಸಾಮಾನ್ಯವಾಗಿ ರೋಗಿಗಳು ಹೊಟ್ಟೆಯಲ್ಲಿ ನೋವು ಇದೆ ಎಂದು ನಟನೆ ಮಾಡಬಹುದು ಎಂದರೆ ಸಾಕ್ಷಿಯು ಕೇಲವೊಮ್ಮೆ ಮಾಡಬಹುದು ಎಂದು ನುಡಿಯುತ್ತಾರೆ. ಚಾಸಾ-1 ರವರನ್ನು ಯಾವುದೇ ಪರೀಕ್ಷೆ ಮಾಡದಿದ್ದರೂ ಪೊಲೀಸರಿಗೆ ಸಹಾಯವಾಗಲು ಸುಳ್ಳು ನಿಪಿ-4 ಕೊಟ್ಟಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.

## 2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.1868/2011
ಸಿಡಬ್ಲ್ಯೂ.9 ಪಿಡಬ್ಲ್ಯೂ.6

| | | |
|---|---|---|
| ಸಾಕ್ಷಿಯ ಹೆಸರು | - | ಎಲ್.ಆರ್. ಮಸಗುಪ್ಪಿ |
| ವಯಸ್ಸು | - | 42 ವರ್ಷ |
| ಉದ್ಯೋಗ | - | ಪೊಲೀಸ ಇನ್ಸ್‌ಪೆಕ್ಟರ ಲೋಕಾಯುಕ್ತ ಧಾರವಾಡ |
| ವಾಸ | - | ಧಾರವಾಡ |

ದಿನಾಂಕಃ 19-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

ನಾನು 19-11-2011 ರಿಂದ 06-04-2013 ರವರೆಗೆ ಗೋಕಾಕ ಗ್ರಾಮೀಣ ಪೊಲೀಸ ಠಾಣೆ ಯಲ್ಲಿ ಪಿಎಸ್.ಐ ಅಂತಾ ಕಾರ್ಯನಿರ್ವಹಿಸಿದ್ದೇನೆ.

ನಾನು ಮುಂದಿನ ತನಿಖೆಯನ್ನು ಚಾಸಾ-8 ರವರಿಂದ ಪಡೆದುಕೊಂಡೆನು .ದಿಃ 15-12-2011 ರಂದು ಚಾಸಾ-1 ರವರು ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆನು. ತನಿಖೆಯನ್ನು ಪೂರ್ಣಗೊಳಿಸಿದ್ದು ಆರೋಪಿಗಳ ವಿರುದ್ಧ ಸಾಕ್ಷಾಧಾರ ಕಂಡು ಬಂದಿದ್ದರಿಂದ ದೋಷಾರೋಪಣೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ನಿಪಿ-4 ರ ಮೇಲೆ ಸಾಕ್ಷಿಯ ಸಹಿಯನ್ನು ನಿಪಿ-4 ಬಿ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಾನು ಚಾಸಾ-8 ರವರಿಂದ ಕಡತಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ-8 ರವರು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಾನು ಖೊಟ್ಟಿ ನಿಪಿ-4 ನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಸುಳ್ಳು ದೋಷಾರೋಪಣೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.